# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 124 (140) |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್<br>(ವಿಧಾನಸಭೆ ಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 28-01-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ಒಂದು ಟ್ರಸ್ಟ್ ತನ್ನ ಆಸ್ತಿಯನ್ನು ಇನ್ನೊಂದು ಟ್ರಸ್ಟ್‌ಗೆ ವರ್ಗಾವಣೆಯ ನೋಂದಣಿ ಸಮಯದಲ್ಲಿ ಕಡಿಮೆ ಮುದ್ರಾಂಕ ಶುಲ್ಕದ ಮೂಲಕ ನೋಂದಣಿ ಮಾಡಿರುವುದರಿಂದ ರೂ.10.74 ಕೋಟಿಯ ನೋಂದಣಿ ಶುಲ್ಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಪ್ರಕರಣದಲ್ಲಿ ರೂ.22,73,165/- ಗಳಷ್ಟು ಕೊರತೆ ಶುಲ್ಕ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಶ್ರೀ ಸತ್ಯಸಾಯಿ ಸರಸ್ವತಿ ಎಜುಕೇಷನ್ ಟ್ರಸ್ಟ್‌ನ ಪರವಾಗಿ ಟ್ರಸ್ಟಿಯಾದ ಶ್ರೀ ರವಿ ಕಸ್ತೂರಿ ರವರು ಪ್ರಶಾಂತಿ ಬಾಲ ಮಂದಿರ ಟ್ರಸ್ಟ್‌ಗೆ ಬರೆದುಕೊಟ್ಟಿರುವ ವರ್ಗಾವಣೆ ಪತ್ರವು ದಸ್ತಾವೇಜು ಸಂಖ್ಯೆ:521/ 2020-21 ರಲ್ಲಿ ದಿನಾಂಕ: 07-08-2020 ರಂದು ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ನೋಂದಣಿ ಯಾಗಿರುತ್ತದೆ. ಸದರಿ ಸ್ವತ್ತಿನ ನೋಂದಣಿ ವೇಳೆಯಲ್ಲಿ ಶೇಕಡ.1% ರಷ್ಟು ನೋಂದಣಿ ಶುಲ್ಕವನ್ನು ಸ್ವತ್ತಿನ ಮಾರುಕಟ್ಟೆ ದರಕ್ಕೆ ಆಕರಿಸದೇ ಇರುವುದರಿಂದ ರೂ.17,42,044/-ಗಳ ಕೊರತೆ ಶುಲ್ಕ ಉಂಟಾಗಿರುವುದಾಗಿ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಪ್ರಕರಣದಲ್ಲಿ ಜಿಲ್ಲಾ ನೋಂದಣಾಧಿಕಾರಿ ಚಿಕ್ಕಮಗಳೂರು ರವರು ಸದರಿ ದಸ್ತಾವೇಜಿನ ಸಂಬಂಧ ಮಹಾಲೇಖಪಾಲರು ಆಕ್ಷೇಪಿಸಿ ರುವ ಆಕ್ಷೇಪಣೆಯನ್ನು ಪರಿಶೀಲಿಸಲು, ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ-46A ಮತ್ತು ನೋಂದಣಿ ಕಾಯ್ದೆ, 1908ರ ಕಲಂ-80 A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಕರಣದಲ್ಲಿ ಉಂಟಾದ ಕೊರತೆ ಶುಲ್ಕ ರೂ. 22,73,165/- ಗಳನ್ನು ಭರಿಸುವಂತೆ ಸಂಬಂಧಪಟ್ಟ ಪಕ್ಷಕಾರರಿಗೆ ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಮಗಳೂರು ರವರು ಆದೇಶ ಸಂಖ್ಯೆ:DRO/Chi/46A(1)/KOP/02/ 2022-23, ದಿನಾಂಕ:16-04-2025 ರಲ್ಲಿ ಆದೇಶಿಸಿರುತ್ತಾರೆ. |

| | | |
|---|---|---|
| ಆ) | ರೂ.10.74 ಕೋಟಿಯ ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ನಷ್ಟ ಮಾಡಿರುವ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಉಪ ನೋಂದಣಾಧಿಕಾರಿಯವರನ್ನು ಅಮಾನತ್ತುಗೊಳಿಸಲಾಗಿದೆಯೇ; ಇಲ್ಲವಾದ್ದಲ್ಲಿ ಯಾವಾಗ ಅಮಾನತ್ತುಗೊಳಿಸಲಾಗುವುದು; (ವಿವರ ನೀಡುವುದು); | ಪ್ರಕರಣದಲ್ಲಿ ರೂ.22,73,165/- ಗಳಷ್ಟು ಕೊರತೆ ಶುಲ್ಕ ಉಂಟಾಗಿದ್ದು, ಸದರಿ ದಸ್ತಾವೇಜನ್ನು ನೋಂದಣಿ ಮಾಡಿರುವ ಉಪ ನೋಂದಣಾಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್‌ನ್ನು ಜಿಲ್ಲಾ ನೋಂದಣಾಧಿಕಾರಿ ಚಿಕ್ಕಮಗಳೂರು ರವರು ಜಾರಿಗೊಳಿಸಿದ್ದು, ಪ್ರಕರಣದಲ್ಲಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಇ) | ಮುದ್ರಾಂಕ ಶುಲ್ಕ ನಷ್ಟವಾಗಿದ್ದು ಈ ಮೊತ್ತವನ್ನು ಸಂಬಂಧಿಸಿದ ಉಪ ನೋಂದಣಾಧಿಕಾರಿಯಿಂದಲೇ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ವಸೂಲು ಮಾಡಲಾಗುವುದು? (ವಿವರ ನೀಡುವುದು); | ಸದರಿ ಪ್ರಕರಣದಲ್ಲಿ ಉಂಟಾಗಿರುವ ರೂ.22,73,165/- ಗಳ ಕೊರತೆ ಶುಲ್ಕಗಳನ್ನು ಭರಿಸುವಂತೆ ಸಂಬಂಧಪಟ್ಟ ಪಕ್ಷಕಾರರಿಗೆ ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಮಗಳೂರು ರವರು ಆದೇಶ ಸಂಖ್ಯೆ:DRO/Chi/46A(1)/KOP /02/2022-23, ದಿನಾಂಕ:16-04-2025 ರಲ್ಲಿ ಆದೇಶಿಸಿರುತ್ತಾರೆ. |

**ಕಂಇ/28/ಎಂಎನ್ಎಸ್ಎ/2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು